# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್-2567/2016/ಡಿಆರ್ಇ-5**

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:07-09-2017.

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ***

ವಿಷಯ: ಶ್ರೀ ಕಿರಣಕುಮಾರ, ವಾಸ: ಮಲ್ಲೇಶ್ವರಂ, 8ನೇ ಕ್ರಾಸ್, ಬೆಂಗಳೂರು ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಕಿರಣಕುಮಾರ, ವಾಸ: ಮಲ್ಲೇಶ್ವರಂ, 8ನೇ ಕ್ರಾಸ್, ಬೆಂಗಳೂರು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿರುವ ದೂರನ್ನು ಸ್ವಯಂ ಪ್ರೇರಿತ ದೂರು ಅಂತ ತಹಶೀಲ್ದಾರರು, ತಾಲ್ಲೂಕು ಕಛೇರಿ, ಹೊಳೆನರಸೀಪುರ ತಾಲ್ಲೂಕು ಹಾಸನ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಸರ್ವೆ ನಂ.9 ಮತ್ತು 10 ಕಸ್ಬಾ ಹೋಬಳಿ ಬಿಲ್ಲೇನಹಳ್ಳಿ ಗ್ರಾಮದ ಜಮೀನುಗಳು ಸರ್ಕಾರದ ಅರಣ್ಯದ ಜಮೀನುಗಳಾಗಿದ್ದು ಸುಮಾರು 16 ಜನ ಖಾಸಗಿ ವ್ಯಕ್ತಿಗಳು ಇದರಲ್ಲಿ ಒತ್ತುವರಿ ಮಾಡಿಕೊಂಡಿದ್ದಾರೆ. ಹಲವಾರು ಸಲ ತಹಶೀಲ್ದಾರರು ಹೊಳೆನರಸೀಪುರ ಇವರಿಗೆ ಅರ್ಜಿ ಕೊಟ್ಟರೂ ಸಹ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ಸೂಕ್ತ ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಜಿಲ್ಲಾಧಿಕಾರಿಗಳು ಹಾಸನ ಜಿಲ್ಲೆ ಇವರ ಆದೇಶದಂತೆ 5 ಎಕರೆ ಮತ್ತು 3 ಎಕರೆಗಳ ಮೇಲ್ಪಟ್ಟು ಇರುವ ಜಮೀನುಗಳ ಒತ್ತುವರಿಯನ್ನು ಆಧ್ಯತೆಯ ಮೇರೆಗೆ ತೆರವುಗೊಳಿಸಲಾಗುತ್ತಿದೆ. ಈ ಪ್ರಕರಣದಲ್ಲಿನ ಎಲ್ಲಾ ಜಮೀನುಗಳು ಚಿಕ್ಕ-ಚಿಕ್ಕ ಒತ್ತುವರಿಗಳು ಇರುವುದರಿಂದ ನಂತರ ಕ್ರಮ ವಹಿಸಲಾಗುವುದು ಅಂತ ತಿಳಿಸಿದ್ದಾರೆ. ಆದರೆ ಸರ್ವೆ ನಂ.9 ಮತ್ತು 10 ರಲ್ಲಿ 10 ಎಕರೆಗಿಂತ ಹೆಚ್ಚಿಗೆ ಒತ್ತುವರಿಯಾಗಿರುವುದು

ಕಂಡುಬಂದಿದ್ದರಿಂದ ಏಕೆ ಕ್ರಮ ವಹಿಸುತ್ತಿಲ್ಲ ಎನ್ನುವ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಗೌರವಾನ್ವಿತರ ಆದೇಶದಂತೆ ಎದುರುದಾರರಿಗೆ ಸೂಚಿಸಲಾಗಿತ್ತು.

4. ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ಸರ್ವೆ ನಂ.9 ರಲ್ಲಿ ಆರ್.ಟಿ.ಸಿ. ಪ್ರಕಾರ 14.21 ಎಕರೆ ಜಮೀನು ಇದ್ದು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಜನಾಂಗದವರಿಗೆ ಸ್ಮಶಾನಕ್ಕಾಗಿ 1.20 ಎಕರೆ ಜಮೀನನ್ನು ಕಾಯ್ದಿರಿಸಿದ್ದು, ಉಳಿದ 13.01 ಎಕರೆ ಗೋಮಾಲದ ಜಮೀನು ಆಗಿರುತ್ತದೆ. ಸರ್ವೆ ನಂ.10 ರಲ್ಲಿ 13 ಎಕರೆ 2 ಗುಂಟೆ ಜಮೀನು ಇದ್ದು, 3 ಎಕರೆ ಸ್ಮಶಾನಕ್ಕೆ ಮೀಸಲು ಇಡಲಾಗಿದೆ. ಭೂಮಾಪಕರ ವರದಿಯ ಪ್ರಕಾರ ಈ ಜಮೀನುಗಳಲ್ಲಿ 33 ಜನರು 1 ಎಕರೆಗಿಂತ ಕಡಿಮೆ ವಿಸ್ತೀರ್ಣದಲ್ಲಿ ಒತ್ತುವರಿ ಮಾಡಿಕೊಂಡಿದ್ದಾರೆ. ಹಲವಾರು ಜನರು ಬಗರ್ ಹುಕುಂ ಸಕ್ರಮೀಕರಣ ಸಮಿತಿಯಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಗಳು ಇತ್ಯರ್ಥವಾಗಿಲ್ಲ. ಆದ್ದರಿಂದ, ಸದರಿ ಅರ್ಜಿಗಳ ವಿಚಾರಣೆಯ ನಂತರ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಬಹುದು. ಸರ್ಕಾರದ ಸುತ್ತೋಲೆ ದಿ: 20-10-2008 ರ ಪ್ರಕಾರ ಬಗರ್ ಹುಕುಂ ಸಕ್ರಮೀಕರಣ ಅರ್ಜಿ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಒತ್ತುವರಿಗಳನ್ನು ತೆರವುಗೊಳಿಸಬಹುದಾಗಿದೆ ಅಂತ ತಿಳಿಸಿರುತ್ತಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ತಹಶೀಲ್ದಾರ ಹೊಳೆನರಸೀಪುರ ಇವರು ಈ ಹಿಂದೆ ದಿ: 22-6-2015 ರಂದು ಒತ್ತುವರಿದಾರರಿಗೆ ನೋಟಿಸ್ ಕೊಟ್ಟಿದ್ದಾರೆ. ಭೂಕಂದಾಯ ಕಾಯ್ದೆ ಕಲಂ 104 ರಡಿಯಲ್ಲಿ ನೋಟಿಸ್ ಕೊಟ್ಟು ಸರ್ಕಾರದ ಜಮೀನನ್ನು ಸರ್ಕಾರದ ಸ್ವಾಧೀನಕ್ಕೆ ಕೊಡುವಂತೆ ತಪ್ಪಿದಂತೆ ಕಲಂ 192(ಎ) ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಅಂತ ತಿಳಿಸಿದ್ದಾರೆ. ನಿಗದಿತ ಸಮಯದಲ್ಲಿ ನೋಟಿಸ್‌ಗೆ ಸಮಜಾಯಿಸಿ ನೀಡದ ಕಾರಣ ದಿನಾಂಕ: 22-7-2015 ರಂದು ಒತ್ತುವರಿದಾರರನ್ನು ಹೊರ ಹಾಕುವಂತೆ ಆದೇಶ ಹೊರಡಿಸಿದ್ದಾರೆ. ಆದರೆ, ಜಿಲ್ಲಾಧಿಕಾರಿಗಳು ಹಾಸನ ಜಿಲ್ಲೆ ಇವರು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ ಬೆಂಗಳೂರು ಇವರ ಪತ್ರಗಳಂತೆ ಮತ್ತು ಅವರ ನಿರ್ದೇಶನದಂತೆ 3 ಎಕರೆಗೆ ಮೇಲ್ಪಟ್ಟ ಒತ್ತುವರಿ ಕಾರ್ಯಗಳನ್ನು ಆಧ್ಯತೆಯ ಮೇರೆಗೆ ತೆಗೆದುಕೊಳ್ಳಲು ಹೇಳಿದ್ದಾರೆ. ಇದೇ ಕಾರಣಕ್ಕಾಗಿ ಒತ್ತುವರಿ ಕಾರ್ಯ ಸ್ಥಗಿತಗೊಂಡಿದೆ. ಸರ್ಕಾರದ ಸುತ್ತೋಲೆ ಆರ್.ಡಿ. 597 ಎಲ್ ಜಿ ಬಿ 2007 ದಿನಾಂಕ: 20-10-2008 ರ ಪ್ರಕಾರ ಬಗರ್ ಹುಕುಂ ಸಕ್ರಮೀಕರಣ ಸಮಿತಿಯ ಮುಂದೆ ಅರ್ಜಿ ಇರುವ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಒತ್ತುವರಿಗಳನ್ನು ತೆರವುಗೊಳಿಸಲು ಆದೇಶ ಇರುತ್ತದೆ.

6. ಆದ್ದರಿಂದ, ತಹಶೀಲ್ದಾರರು ಹೊಳೆನರಸೀಪುರ ಇವರು ಸರ್ವೆ ನಂ.9 ಮತ್ತು 10 ಕಸ್ಬಾ ಹೋಬಳಿ ಚಿಲ್ಲೇನಹಳ್ಳಿ ಗ್ರಾಮದ ಜಮೀನುಗಳು ಸರ್ಕಾರದ ಜಮೀನುಗಳಾಗಿದ್ದು ಈಗಾಗಲೇ ಭೂಕಂದಾಯ ಕಾಯ್ದೆ ಕಲಂ 104 ಅನ್ವಯ ಎಲ್ಲಾ ಒತ್ತುವರಿದಾರರಿಗೆ ನೋಟಿಸ್ ಕೊಟ್ಟಿರುವುದರಿಂದ ಒತ್ತುವರಿಯನ್ನು ತೆರವುಗೊಳಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1) ರಡಿಯಲ್ಲಿ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಶಿಪಾರಸ್ಸು ಮಾಡಲಾಗಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/9/17

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ